ಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿಕೊಂಡಿದ್ದಾರೆ ಅದನ್ನು ರಾಜ್ಯ ಸರ್ಕಾರಕ್ಕಿರುವ ಸೀಮೆಎಣ್ಣೆಯ ಪ್ರಮಾಣದಲ್ಲಿ ಕೊಡಲು ಆಗುವುದಿಲ್ಲವೆಂದು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದಿಂದ ಸೀಮೆಎಣ್ಣೆಯ ಪ್ರಮಾಣ ಜಾಸ್ತಿ ಬಂದರೆ ಮಾತ್ರ ಕೊಡಲು ಸಾಧ್ಯವಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ನೆರೆರಾಜ್ಯವಾದ ಕೇರಳದಲ್ಲಿ ಸಣ್ಣ ರೈತರಿಗೆ, ಪಂಪುಸೆಟ್ಟುಗಳನ್ನು ಹೊಂದಿರುವವರಿಗೆ ಸಬ್ಸಿಡೈಸ್ ರೇಟ್‌ನಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡುತ್ತಿದ್ದಾರೆ. ಅದಕ್ಕೆ ಕೇಂದ್ರದಿಂದ ಸಬ್ಸಿಡಿ ಕೊಡುತ್ತಾರೋ ಅಥವಾ ರಾಜ್ಯ ಸರ್ಕಾರದಿಂದ ಕೊಡುತ್ತಾರೋ ನನಗೆ ಗೊತ್ತಿಲ್ಲ. ಕೇರಳ ರಾಜ್ಯದಲ್ಲಿ ಸಣ್ಣ ರೈತರಿಗೆ ಸಬ್ಸಿಡಿ ಮೂಲಕ ಸೀಮೆಎಣ್ಣೆಯನ್ನು ಕೊಡುವುದಾದರೆ ಕರ್ನಾಟಕ ರಾಜ್ಯದಲ್ಲಿ ಕೂಡ ಅದನ್ನು ತರಿಸಿಕೊಂಡು ಆ ದಾರಿಯಲ್ಲಿ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಇನಾಂದರ್ : ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿ ಬೆಳಕನ್ನು ಒದಗಿಸುವ ಉದ್ದೇಶದಿಂದ ಹತ್ತು ಲೀಟರ್ ಸೀಮೆಎಣ್ಣೆಯನ್ನು ಒದಗಿಸಬೇಕು ಎಂಬ ಉದ್ದೇಶದಿಂದ ಪ್ರತಿ ತಿಂಗಳು 95 ಸಾವಿರ ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಒದಗಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿಯವರು ಮನವಿ ಮಾಡಿಕೊಂಡಿದ್ದರು. ಇದರ ಬಗ್ಗೆ ಸಾಕಷ್ಟು ಒತ್ತಾಯವನ್ನು ಮಾಡಿದ್ದರು ಸಹ ಅಷ್ಟು ಪ್ರಮಾಣದಲ್ಲಿ ಕೇಂದ್ರದಿಂದ ನಮಗೆ ಸೀಮೆಎಣ್ಣೆ ಬರುತ್ತಿಲ್ಲ. ಆದ್ದರಿಂದ ನಮಗೆ ಇರುವ ಇತಿಮಿತಿಯೊಳಗೆ ಅಲ್ಲಾಮೆಂಟ್ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿರುವಂತೆ ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಎಸ್.ಪುಟ್ಟರಂಗನಾಥ್ : ಮಾನ್ಯ ಅಧ್ಯಕ್ಷರೆ, ಸೀಮೆಎಣ್ಣೆಯ ಹಂಚಿಕೆಯು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿ ಹಂಚಿಕೆಯಾಗಿದೆ. ಚಿಕ್ಕಮಗಳೂರು ಜಿಲ್ಲೆ ಮಲೆನಾಡು ಜಿಲ್ಲೆ. ಅಲ್ಲಿ ಸೀಮೆಎಣ್ಣೆಯನ್ನು ಜಾಸ್ತಿ ಕೊಡುತ್ತಾರೆ. ಆದರೆ ಪಕ್ಕದ ಜಿಲ್ಲೆಯಾದ ಹಾಸನದಲ್ಲಿ ಕಡಿಮೆಯಾಗಿದೆ. ಯಾವ ಕಾರಣದಿಂದ ಈ ರೀತಿ ವ್ಯತ್ಯಾಸವಾಗುತ್ತಿದೆ? ಇದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಡಿ.ಬಿ. ಇನಾಂದರ್ : ಆಯಾಯ ಜಿಲ್ಲಾಧಿಕಾರಿಗಳು ಇದರ ಹಂಚಿಕೆ ಮಾಡುತ್ತಾರೆ. ತಾವೇನು ವ್ಯತ್ಯಾಸದ ಬಗ್ಗೆ ಹೇಳಿದ್ದೀರಿ ಅದರ ಬಗ್ಗೆ ವಿಚಾರ ಮಾಡುತ್ತೇನೆ.

ರಾಜ್ಯದಲ್ಲಿ ಪರಸ್ಪರ ಘರ್ಷಣೆಯ ಸಮಯದಲ್ಲಿ ಸಂಭವಿಸಿದ ಸಾವುಗಳ ಬಗ್ಗೆ

170 (1599) ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್‌ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1999ರ ಜನವರಿ 1 ರಿಂದ ರಾಜ್ಯದಲ್ಲಿ ಸಂಭವಿಸಿದ ಪರಸ್ಪರ ಘರ್ಷಣೆಗಳಲ್ಲಿನ ಸಾವುಗಳು ಸಂಖ್ಯೆ ಎಷ್ಟು (31-3-2000ರವರೆಗೆ).

2) ಈ ಘರ್ಷಣೆಯಲ್ಲಿ ಮೃತಪಟ್ಟವರ ಹೆಸರುಪೋಲೀಸ್ ಠಾಣೆಯ ವಿವರಗಳು;

3) ಮೃತರ ಶವ ಪರೀಕ್ಷೆಯ ಜೊತೆಗೆ ವಿಧಿವಿಜ್ಞಾನ ತಜ್ಞರಿಂದ ಸಾವುಗಳು ಕಾರಣಗಳನ್ನು ಪರಿಶೀಲಿಸಲಾಗಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

1) ದಿನಾಂಕ: 1-1-99ರಿಂದ 31-3-2000ರವರೆಗೆ 5 ಜನ ಮೃತ ಪಟ್ಟಿರುತ್ತಾರೆ.

2) ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಘರ್ಷಣೆಯಲ್ಲಿ ಮೃತಪಟ್ಟವರ ಹೆಸರು	ಪೋಲೀಸ್ ಠಾಣೆ ಹೆಸರು	ಮೊಕದ್ದಮೆ ಸಂಖ್ಯೆ ಮತ್ತು ಕಲಂ.
1)	ಎರಿಕ್ ಡೇನಿಯಲ್ ಡಿಸೋಜಾ	ಹೈಗ್ರೌಂಡ್ಸ್ ಪೋಲೀಸ್ ಠಾಣೆ, ಬೆಂಗಳೂರು ನಗರ	ಮೊ.ಸಂ.647:99 ಕಲಂ 224 332-392-307 ಜೊತೆಗೆ 511 ಐಪಿಸಿ.
2)	ತಾಜ್‌ಮುಲ್ಲಾ (ವಯಸ್ಸು-24)	ಮಲ್ಲೇಶ್ವರ ಪೋಲೀಸ್ ಠಾಣೆ, ಬೆಂಗಳೂರು ನಗರ	ಮೊ.ಸಂ.325:99 ಕಲಂ 395, 332 ಜೊತೆಗೆ 86 ಮತ್ತು 87 ಕರ್ನಾಟಕ ಅರಣ್ಯ ಕಾಯ್ದೆ
3)	ಅಮಜತ್ ಖಾನ್ (ವಯಸ್ಸು-22)	ಮಲ್ಲೇಶ್ವರ ಪೋಲೀಸ್ ಠಾಣೆ, ಬೆಂಗಳೂರು ನಗರ	
4)	ಭಾಸ್ಕರ್ ಉ: ಬಾಲ ಕೃಷ್ಣನ್ (ವಯಸ್ಸು-28)	ರಾಯಚೂರು ಗ್ರಾಮಾಂತರ ಠಾಣೆ	ಮೊ.ಸು.81:99, ಕಲಂ 353-307-120(ಬಿ) ಜೊತೆಗೆ 35 ಐಪಿಸಿ ಮತ್ತು 27,28, ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ
5)	ಅಂಬಾಜಿ ಪಿರಪ್ಪ ಪಿರ ಗೌಂಡ್ (ವಯಸ್ಸು-28)	ಕಗವಾಡಿ ಪೋಲೀಸ್ ಠಾಣೆ (ಬೆಳಗಾಂ ಜಿಲ್ಲೆ)	ಮೊ.ಸಂ.1 :99 ಕಲಂ 353-332-307-392-224-504-506 ಐಪಿಸಿ ಜೊತೆಗೆ 25 ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ

3) ಶ್ರೀ ಎರಿಕ್ ಡೇನಿಯಲ್ ಡಿಸೋಜಾರವರ ಸಾವಿನ ಪ್ರಕರಣದಲ್ಲಿ ಹದಿನಾಲ್ಕು ವಸ್ತುಗಳನ್ನು ತಜ್ಞರ ಅಭಿಪ್ರಾಯಕ್ಕಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ ಮತ್ತು ವರದಿಯನ್ನು ನಿರೀಕ್ಷಿಸಲಾಗಿದೆ. ಇತರೆ ಪ್ರಕರಣಗಳಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ಪರಿಣಿತರ ಅಭಿಪ್ರಾಯದ ಅವಶ್ಯಕತೆ ಇರುವುದಿಲ್ಲ.

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಎನ್‌ಕೌಂಟರ್‌ನಲ್ಲಿ ಕೊಲ್ಲುವವರು ಸಮಾಜ ದ್ರೋಹಿಗಳಾದರು ಸಹ ಯಾವುದೇ ವ್ಯಕ್ತಿಗಳನ್ನು ಪೋಲೀಸರು ಆ ರೀತಿ ಕೊಲ್ಲುವುದು ಅಷ್ಟೊಂದು ಸೂಕ್ತವಲ್ಲ. ಆದರೆ ಆ ರೀತಿ ಕೊಲೆ ಮಾಡಿದ ಮೇಲೆ Forensic Laboratory ಮೂಲಕ Bulledric

Report ಎಂದು ಇದೆ ಅದನ್ನು ತರಿಸಬೇಕು. ಆದರೆ ನಮ್ಮ ರಾಜ್ಯದಲ್ಲಿ ಯಾವುದೇ ಕೇಸ್‌ನಲ್ಲಿ ಆ ರೀತಿಯಾದ ವರದಿಯನ್ನು ತರಿಸಿಲ್ಲ. ಆದ್ದರಿಂದ ಇದನ್ನು ಅತ್ಯಂತ ಅಗತ್ಯವಾಗಿ ತರಬೇಕೆಂದು ಒತ್ತಾಯ ಮಾಡುತ್ತೇನೆ. ಏಕೆಂದರೆ, National Police Commission headed by Shri Dharamveer ಅವರು ಒಂದು ಶಿಫಾರಸ್ಸು ಮಾಡಿದ್ದಾರೆ. ಪ್ರತಿಯೊಂದು ಎನ್‌ಕೌಂಟರ್‌ನಲ್ಲಿ ಆ ಸಮಿತಿಯವರು ಮಾಡಿರುವ ಈ ಶಿಫಾರಸ್ಸನ್ನು ಜಾರಿ ಮಾಡಬೇಕೆಂದು ಹೇಳಿದ್ದಾರೆ. ಆದರೆ ಅದನ್ನು ನಮ್ಮ ರಾಜ್ಯದಲ್ಲಿ ಪಾಲಿಸುತ್ತಿಲ್ಲ. ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಒಟ್ಟಿನಲ್ಲಿ ಬ್ಯಾಲೆಸ್ಟಿಕ್ ರಿಪೋರ್ಟ್ ಅತ್ಯಂತ ಅಗತ್ಯ. ಇದನ್ನು ನಾವು ಮಾಡುತ್ತಿಲ್ಲ. ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಆ ಐದು ಜನರನ್ನು ನಾವು ಈಗಾಗಲೇ ಫೆರೆನ್ಸಿಕ್ ಲ್ಯಾಬೋರೇಟರಿಗೆ ಕಳಿಸಿ ವರದಿ ಕೇಳಿದ್ದೇನೆ. ಆದರೆ ಅದು ಬಂದಿಲ್ಲ, ನಾವು ಆ ವರದಿಗಾಗಿ ಕಾಯುತ್ತಿದ್ದೇವೆ. ಬೆಂಗಳೂರಿನಲ್ಲಿ ಮಾತ್ರ ಇಂಥ ಲ್ಯಾಬೋರೇಟರಿ ಇರುವುದರಿಂದ ಎಲ್ಲಾ ಕೇಸ್‌ಗಳಲ್ಲಿ ತಕ್ಷಣವೇ ವರದಿ ನೀಡಲು ಆಗುವುದಿಲ್ಲ. ಆದ್ದರಿಂದ ಮೈಸೂರು, ದಾವಣಗೆರೆ, ಗುಲ್ಬರ್ಗಾಗಳಲ್ಲಿ ಹೊಸದಾಗಿ ಮೂರು ಇಂಥ ಲ್ಯಾಬೊರೇಟರಿಗಳನ್ನು ತೆರೆಯಬೇಕೆಂದಿದ್ದೇವೆ. ಈ ರೀತಿ ಮೂರು ವಿಭಾಗಗಳಲ್ಲಿ ಇದನ್ನು ಮಾಡಿದರೆ ಬೆಂಗಳೂರಿನಲ್ಲಿರುವ ಒಂದೇ ಒಂದು ಲ್ಯಾಬೋರೇಟರಿಯ ಮೇಲಿರುವ ಒತ್ತಡ ಕಡಿಮೆಯಾಗುತ್ತದೆ. ಮಾನ್ಯ ಸದಸ್ಯರು ಹೇಳಿರುವಂತೆ ನ್ಯಾಷನಲ್ ಪೋಲೀಸ್ ರಾಜ್ಯದಲ್ಲಿ

ಕಳೆದ ಮೂರು ವರ್ಷಗಳಲ್ಲಿ ನಡೆದ ಕೊಲೆ ಪ್ರಕರಣಗಳ ಸಂಖ್ಯೆ

(1565) 171 ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಅದ ಕೊಲೆಗಳ ಸಂಖ್ಯೆ ಎಷ್ಟು ? ವರ್ಷವಾರು ಮಾಹಿತಿ ನೀಡುವುದು.

ಆ) ಅವರುಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟಪಂಗಡಕ್ಕೆ ಸೇರಿದವರ ಸಂಖ್ಯೆ ಎಷ್ಟು?

ಇ) ಎಷ್ಟು ಪ್ರಕರಣಗಳಲ್ಲಿ ಶಿಕ್ಷಯಾಗಿದೆ ? ವರ್ಷವಾರು ಮಾಹಿತಿ ನೀಡುವುದು;

ಈ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಿಗೆ ನೀಡಿದ ಪರಿಹಾರದ ಮೊತ್ತ ಎಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ನಡೆದ ಕೊಲೆಗಳು

1997	-	1672
1998	-	1693
1999	-	1651
ಒಟ್ಟು	**-**	**5016**